MVC No. 404/2017 PW-2

**<u>ದಿನಾಂಕ 18.08.2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ :ಅರ್ಜಿದಾರರ ಪರ ವಕೀಲರಿಂದ :</u>**

ನಾನು ನನ್ನ ಮುಖ್ಯ ವಿಚಾರಣಾ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಹೇಳಿದ ವಿಚಾರಗಳೆಲ್ಲವೂ ಸತ್ಯವಾಗಿದ್ದು, ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ.

ನಾನು ನನ್ನ ಪರ ಸಾಕ್ಷಿಯಾಗಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ಕೇಸ್ ಶೀಟನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-67 ಎಂದು, ಇತ್ತೀಚಿನ 3 ಕ್ಷಕಿರಣಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ-68 ಎಂದು, ಇತ್ತೀಚಿನ ಒ ಪಿ ಡಿ ಸ್ಲಿಪ್ ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-69 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರ್ 2 ಪರ ಶ್ರೀ ಎಸ್ ವೈ ಎಸ್ ವಕೀಲರಿಂದ :</u>**

ಗಾಯಾಳು ನಮ್ಮ ಆಸ್ಪತ್ರೆಗೆ 01.01.2017 ರಂದು ಬೆಳಗಿನ ಜಾವ 3.00 ಗಂಟೆಗೆ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಯಿಂದ ಚಿಕಿತ್ಸೆಗಾಗಿ ಬಂದಿರುತ್ತಾರೆ. ಆಕೆ ಅಪಘಾತ ರಸ್ತೆ ಬದಿಯಲ್ಲಿ ನಿಂತಿದ್ದಾಗ ವಾಹನ ಡಿಕ್ಕಿ ಪಡಿಸಿ ಆಗಿರುತ್ತದೆ ಎಂದು ಬರೆದುಕೊಂಡಿರುತ್ತೇನೆ. ಯಾವ ವಾಹನ ಡಿಕ್ಕಿ ಪಡಿಸಿರುತ್ತದೆ ಮತ್ತು ಯಾವ ರೀತಿ ಡಿಕ್ಕಿ ಪಡಿಸಿರುತ್ತದೆ ಎಂದು ಬರೆದುಕೊಂಡಿಲ್ಲ. ಸದರಿ ವಾಹನವನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ಬರೆದುಕೊಂಡಿಲ್ಲ. ಗಾಯಾಳು ನಮ್ಮ ಆಸ್ಪತ್ರೆ ಬಂದು ದಾಖಲಾದ ನಂತರ ಅವರಿಗೆ ನಾನು ಚಿಕಿತ್ಸೆ ನೀಡಿರುತ್ತೇನೆ. ನಾನು ಇತ್ತೀಚೆಗೆ ಅರ್ಜಿದಾರರನ್ನು ಪರೀಕ್ಷೆ ಮಾಡಿದಾಗ ಅವರಿಗೆ ಆಗಿದ್ದ ಮೂಳೆ ಮುರಿತ ಕೂಡಿಕೊಂಡಿತ್ತು. ಅರ್ಜಿದಾರರು ನಮ್ಮ ಆಸ್ಪತ್ರೆಯಿಂದ ಡಿಸ್ ಚಾರ್ಜ್ ಆದ ನಂತರ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ದಾಖಲೆ ನಮ್ಮ ಬಳಿ ಇಲ್ಲ ಆದರೆ ಅವರ ಬಳಿಯೇ

ಇರುತ್ತದೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಪುಟ ಸಂಖ್ಯೆ 2 ರಲ್ಲಿ ಹೇಳಿರುವಂತಹ ತೊಂದರೆಗಳು ಫಿಜಿಯೋತೆರೆಪಿ ತೆಗೆದುಕೊಂಡರೆ ಕಡಿಮೆಯಾಗುತ್ತದೆ ಎಂದರೆ ಹೌದು ಆದರೆ ಅರ್ಜಿದಾರರು ಆ ರೀತಿಯ ಚಿಕಿತ್ಸೆ ಪಡೆದುಕೊಂಡರೂ ಕೂಡ ನೋವು ಕಡಿಮೆಯಾಗಿಲ್ಲ ಎಂದು ನುಡಿಯುತ್ತಾರೆ. ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂದು Mobility and Stability component ನಲ್ಲಿ ಹೆಚ್ಚಿನ ನ್ಯೂನ್ಯತೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಪುಟ ಸಂಖ್ಯೆ 5 ರಲ್ಲಿ ಹೇಳಿರುವಂತಹ calculation ಅನ್ನು ತಪ್ಪಾಗಿ ಹೇೞಿರುತೇತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ Perticular limb ಗೆ ಶೇಕಡಾ 8-10 ರಷ್ಟು ನ್ಯೂನ್ಯತೆ ಮತ್ತು whole body ಗೆ ಶೇಕಡಾ 5 ರಷ್ಟು ನೂನ್ಯತೆ ಬರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ವಯಸ್ಸಾಗಿದ್ದ ಕಾರಣದಿಂದ ಮೆಟ್ಟಿಲು ಹತ್ತಲು ತೊಂದರೆ ಆಗುತ್ತದೆ ಎಂದರೆ ಹಾಗೇ ಆಗಿದ್ದರೆ ಎರಡೂ ಕಾಲುಗಳಿಗೂ ತೊಂದರೆ ಆಗುತ್ತಿತ್ತು ಆದರೆ ಅರ್ಜಿದಾರರಿಗೆ ಎಡ ಕಾಲಿಗೆ ಮಾತ್ರ ತೊಂದರೆ ಇರುತ್ತದೆ ಎಂದು ಹೇಳುತ್ತಾರೆ. ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂದು ಸುಳ್ಳು ಪ್ರಮಾಣ ಪತ್ರವನ್ನು ನೀಡಿ, ಸುಳ್ಳು ನ್ಯೂನ್ಯತೆಯನ್ನು ನಿರ್ಧರಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ.ಹೇ.ಕೇ.ಸ.ಒ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.